The motion was adopted ane clause, preamble and the enacting formual were added to the bill.)

MOTION TO PASS

SRI M. CHANDRASEKARA.—Sir m)ve that

'The Karnataka Opon Places (Prevention and Disfigurement)(Amendment) Bill, 1983 be passed.

MR. SPEAKER.—Motion moved. The question is;

'That the Karnataka Open Places Prevention and Disfigurement)(Amendment) Bill, 1983 be passed.

The Motion was adopted and the bill was passed

ನಿರ್ಲಕ್ಷಿನೇ ಇಸವಿಯ ಕರ್ನಾಟಕ ರಾಜ್ಯದ ವಕೀಲರುಗಳ ಕಲ್ಯಾಣ ವಿಧೇಯಕ.
ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮಂತ್ರಿ, ಸಂಸದೀಯ ವ್ಯವಹಾರಗಳ ಮಂತ್ರಿಗಳು)

ಮಾನ್ಯ ಅಧ್ಯಕ್ಷರೆ.—"ನಿರ್ಲಕ್ಷಿನೇ ಇಸವಿಯ ಕರ್ನಾಟಕ ರಾಜ್ಯದ ವಕೀಲರುಗಳ ಕಲ್ಯಾಣ ನಿಧಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಪ್ರಾರ್ಥಿಸುತ್ತೇನೆ,"

ಪ್ರಸ್ತಾವನೆಯನ್ನು ಸೂಚಿಸಲಾಗುವುದು.

ಶೆ-00 ಪಿ. ಎಂ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ವಕೀಲರ ಕಲ್ಯಾಣ ನಿಧಿಗೆ ಸಂಬಂಧಪಟ್ಟ ವಿದೇಯಕ ಇದಾಗಿದೆ. ಹಿಂದಿನ ಸರ್ಕಾರದವರು ಇದನ್ನು ಜಾರಿಗೆ ತರಬೇಕೆಂಬ ಉದ್ದೇಶದಿಂದ ಮಾನ್ಯ ಸದಸ್ಯರಾದ ರಾಮಕೃಷ್ಣ ಅವರು ಈ ಬಿಲ್ಲನ್ನು ತಯಾರು ಮಾಡಿದ್ದರು. ಸಮಯ ಇಲ್ಲದೇ ಇದ್ದುದರಿಂದ ಸಭೆಯ ಮುಂದೆ ಇದನ್ನು ಅವರು ತರಲಾಗಲಿಲ್ಲ. ವಿರೋಧ ಪಕ್ಷದಲ್ಲಿ ಇದ್ದಾಗ ಅವರಿಂದ ಒಂದು ಪ್ರತಿಯನ್ನು ತೆಗೆದುಕೊಂಡು ಹೋಗಿ ಬೆಂಗಳೂರು ನಗರ ವಕೀಲ ಸಂಘದ ಮಾನ್ಯ ಸದಸ್ಯರ ಜೊತೆ ಮಾತನಾಡಿದ್ದೇವೆ. ಕೇರಳ ರಾಜ್ಯದಲ್ಲಿ ಈ ಕಾನೂನು ಜಾರಿಯಲ್ಲಿದೆ. ದೇಶದ ಇತರ ರಾಜ್ಯಗಳಲ್ಲೂ ಈ ಕಾನೂನು ಜಾರಿಯಲ್ಲಿದೆ. ಇದು ಸಾಮಾಜಿಕ ನ್ಯಾಯವನ್ನು ದೊರಕಿಸಿ ಕೊಡುವ ಒಂದು ಮೂಲಭೂತವಾದ ಕಾನೂನಾಗಿದೆ. ವಕೀಲರು ಎಲ್ಲರೂ ಕೂಡಾ ಹಣವಂತರೆಂಬ ಒಂದು ಸಾಮಾನ್ಯ ತಿಳುವಳಿಕೆ ಇದೆ. ಆದರೆ ಅವರಲ್ಲೂ ಬವಣೆ ಪಡುತ್ತಿರುವವರು ಬಹಳ ಜನ ಇದ್ದಾರೆ ಈ ಒಂದು ವೃತ್ತಿಯಲ್ಲಿ ತೊಡಗಿರುವಾಗ ಇವರುಗಳು ಹಣದ ಹೊಡುವಿಕೆಯನ್ನು ಮಾಡುವುದಕ್ಕಾಗುವುದಿಲ್ಲ. ಇಂತಹವರಿಗೆ ಅನುಕೂಲ ಆಗಲಿ ಎಂದು ಕಲ್ಯಾಣ ನಿಧಿಯ ಮೂಲ ತತ್ವವನ್ನು ಇಟ್ಟುಕೊಂಡು ಈ ಒಂದು ವಿದೇಯಕವನ್ನು ರೂಪಿಸಲಾಗಿದೆ. ಇದು ಬಹಳ ಅವಶ್ಯಕವಾಗಿ ಬೇಕಾಗಿರತಕ್ಕದ್ದಾಗಿದೆ ಇದರಲ್ಲಿ ಮುಖ್ಯವಾಗಿ ೨ ಅಂಶಗಳು ಇವೆ. ವಕೀಲರ ಕಲ್ಯಾಣ ನಿಧಿ ಸ್ಥಾಪನೆ ಮಾಡುವುದು. ಕಲ್ಯಾಣ ನಿಧಿಯನ್ನು ರೂಢಿಸಿಕೊಂಡು ಹೋಗಿ ಇದನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗುವ ಆಡಳಿತಾತ್ಮಕ ಸೂತ್ರ ಇದರಲ್ಲಿ ಇದೆ. ಇದನ್ನು ನಡೆಸಿಕೊಂಡು ಹೋಗುವವರು ವಕೀಲರೇ. ಇದರ ಒಂದು ಫಂಡ್‌ಗೆ ಹಣವನ್ನು ಸೇರಿಸಿಕೊಂಡು ಹೋಗಲಾಗುತ್ತದೆ. ಈ ಒಂದು ಫಂಡ್‌ಗೆ ಬಾರ್ ಅಸೊಶಿಯೇಷನ್ ಅವರು ಕೊಡುವ ಬಾರ್ ಕೌನ್ಸಿಲ್ ಆಫ್

ಇಂಡಿಯಾದವರು ಕೊಡುವ, ಮತ್ತಿತರ ಸಂಸ್ಥೆಯವರು ಕೊಡುವ, ವಕೀಲರು ಕೊಡುವ ಹಣ ಇದಕ್ಕೆ ಸೇರುತ್ತದೆ. ಸರ್ಕಾರದವರು ಕೊಡುವ ಹಣವೂ ಇದಕ್ಕೆ ಸೇರಿರುತ್ತದೆ. ಅನೇಕ ಮೂಲಗಳಿಂದ ಬರತಕ್ಕ ಹಣ ಈ ಒಂದು ಫಂಡ್ ಸ್ಥಾಪನೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಇದನ್ನು ವಿತರಣೆ ಮಾಡತಕ್ಕ ಅಧಿಕಾರ ಕೂಡಾ ವಕೀಲರ ಸಂಘದ ಸದಸ್ಯರಿಗೆ ಮತ್ತು ಈ ಫಂಡ್‌ಗೆ ಸೇರಿತಕ್ಕ ವಕೀಲರಿಗೆ ಬಿಟ್ಟಿದ್ದು. ಎರಡನೆಯದಾಗಿ ಇದು ಎಲ್ಲಾ ವಕೀಲರಿಗೂ ಕೂಡಾ ಅನ್ವಯವಾಗಿದ್ದರು ಕೂಡಾ ಈ ಫಂಡ್‌ಗೆ ಅವರು ಸದಸ್ಯರಾಗಿದ್ದರೆ ಅಂತಹವರಿಗೆ ಇದು ಸಿಗುತ್ತದೆ. The members of the Bar Association who have become the members of this fund have got to make the contribution. ಅವರ ಈ ಫಂಡ್‌ಗೆ ಸದಸ್ಯರಾಗಿ ಸೇರುವಾಗ ಅರ್ಜಿ ಹಾಕಿ ಕೆಲವು ಭಾಗದ ಹಣವನ್ನು ಕಟ್ಟಬೇಕಾಗುತ್ತದೆ. ಇಷ್ಟು ವರ್ಷ ಪ್ರಾಕ್ಟೀಸ್ ಮಾಡಿರುವವರು ಇಷ್ಟು ಹಣ ಕೊಡಬೇಕೆಂಬ ನಿಯಮ ಇದರಲ್ಲಿ ಅಡಕವಾಗಿದೆ. ಇದಕ್ಕೆ ಎಲ್ಲಾ ಹಣವನ್ನು ಸರ್ಕಾರದವರೇ ಕೊಡುವುದಿಲ್ಲ. ಸ್ವಲ್ಪ ಭಾಗದ ಹಣವನ್ನು ಸರ್ಕಾರ ಕೊಡಬಹುದು. ಅದನ್ನು ಕೊಡಬೇಕೆಂದೇನೂ ನಿಯಮ ಇಲ್ಲ. ಆದುದರಿಂದ ಸ್ವಯಂ ಕೃತವಾಗಿ ವಕೀಲರೇ ನಡೆಸಿಕೊಂಡು ಹೋಗುವ ಕಲ್ಯಾಣ ನಿಧಿಗೆ ಸಂಬಂಧಪಟ್ಟದ್ದು ಇದು ಆಗಿದೆ. ಯಾರು ತಮ್ಮ ಪ್ರಾಕ್ಟೀಸನ್ನು ಬಿಡುತ್ತಾರೆ, ಯಾರು ತಮ್ಮ ಹೆಸರನ್ನು ಆಡ್ವೊಕೇಟ್ಸ್ ರೋಲ್‌ನಿಂದ ತಮ್ಮ ಹೆಸರನ್ನು ತೆಗೆಸಿಹಾಕಂತ್ತಾರೆ ಅಂತಹವರಂ ಈ ಕಲ್ಯಾಣನಿಧಿಯಿಂದ ಹಣವನ್ನು ತೆಗೆದುಕೊಳ್ಳಬಹುದಾಗಿದೆ. ಹಾಗೂ ೫ ವರ್ಷದಿಂದ ೩೦ ವರ್ಷದ ವರೆಗೆ ಯಾರು ಪ್ರಾಕ್ಟೀಸ್ ಮಾಡಿರುತ್ತಾರೆ ಅವರು ೫ ಸಾವಿರದಿಂದ ೩೦ ಸಾವಿರ ರೂಪಾಯಿವರೆಗೆ ಹಣವನ್ನು ಪಡೆದುಕೊಳ್ಳಬಹುದಾಗಿದೆ. ಇತ್ತೀಚೆಗೆ ನಮ್ಮ ರಾಜ್ಯದ ಎಲ್ಲಾ ಜಿಲ್ಲಾ ವಕೀಲರ ಸಂಘಗಳಿಗೂ ಭೇಟಿ ಕೊಟ್ಟಿದ್ದೇನೆ. ಎಲ್ಲಾ ಕಡೆಯ ವಕೀಲರು ಈ ಬಗ್ಗೆ ಏಕೆ ತಡಾ ಮಾಡಿದ್ದೀರಿ ಈ ಬಗ್ಗೆ ಬಿಲ್ ತನ್ನಿರೆಂದು ಕೇಳಿದಾಗ, ಈ ಬಗ್ಗೆ ಬಿಲ್ ತರುವುದಾಗಿ ಅವರಿಗೆ ಆಶ್ವಾಸನೆ ಕೊಟ್ಟು ಬಂದಿದ್ದೇನೆ. ಇದು ಸರ್ವಸಮ್ಮತ ಬಿಲ್ ಆಗಿದ್ದು ಮುಂದೆ ಇದರ ಅನುಷ್ಠಾನದಲ್ಲಿ ಏನಾದರೂ ಲೋಪದೋಷಗಳು ಕಂಡು ಬಂದಲ್ಲಿ ಅದಕ್ಕೆ ತಿದ್ದುಪಡಿ ತರಲು ಸಹಾ ಅವಕಾಶವಿದೆ. ಆದ್ದರಿಂದ ಈ ಒಂದು ಬಿಲ್‌ಗೆ ಅವಕಾಶ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಹಿಂದಿನ ಸರ್ಕಾರ ಈ ಬಿಲ್ಲನ್ನು ತಯಾರು ಮಾಡಿತ್ತು.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಇನ್ನೊಂದು ವಿಷಯವನ್ನು ಹೇಳಲು ಮರೆತೆ. ಈ ಒಂದು ಬಿಲ್ಲನ್ನು ಹಿಂದಿನ ಸಭೆಯಲ್ಲೇ ಇಂಟ್ರಡ್ಯೂಸ್ ಮಾಡಿದ್ದು ಪಾಸ್ ಆಗುವುದಕ್ಕೂ ಸಹಾ ಅವಕಾಶವಿತ್ತು. ಆದರೆ ಇದನ್ನು ನಾನೇ ಮುಂದೆ ಹಾಕುವುದಕ್ಕೆ ಪ್ರಯತ್ನ ಪಟ್ಟೆ. ಕಾರಣ ನಮ್ಮ ವಕೀಲರ ಜೊತೆ ಕೆಲಸ ಮಾಡುವ ಒಂದು ಗುಂಪಿನ ಜನರು ಇದ್ದಾರೆ, ಅವರು ಗುಮಾಸ್ತರು. ಅವರಿಗೂ ಇದರಿಂದ ಒಂದು ಬೆನಿಫಿಟ್ ಸಿಗಬೇಕೆನ್ನುವ ಬಗ್ಗೆ ಕಾನೂನಿನ ತಿದ್ದುಪಡಿಯನ್ನು ಸಭೆಯ ಮುಂದೆ ಇಟ್ಟಿದ್ದೇನೆ. ದಯವಿಟ್ಟು ಅದನ್ನು ಕೂಡಾ ಇದರಲ್ಲಿ ಸೇರಿಸಿಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಅದನ್ನು ಕೂಡಾ ನಾನು ಓದುತ್ತೇನೆ. ನಿನ್ನೆ ನಾನು ಈ ತಿದ್ದುಪಡಿಯನ್ನು ಕೊಟ್ಟಿದ್ದೇನೆ. ಈ ವಕೀಲರ ಗುಮಾಸ್ತರಿಗೂ ಏಕೆ ಬೆನಿಫಿಟ್ ಕೊಡಬೇಕೆಂದು ಕೇಳಬಹುದು. ವಕೀಲರ ಸರಿಯಾಗಿ ಕೆಲಸ ಮಾಡಬೇಕಾದರೆ ಎಫಿಶಿಯಂಟ್ ಕ್ಲರ್ಕ್ ಇರಬೇಕಾಗಂತ್ತದೆ. ಅವರೂ ಸಹಾ ತಮ್ಮ ಸೇವೆಯನ್ನು ಸಲ್ಲಿಸುತ್ತಾರೆ.

ಶ್ರೀ ಕೆ. ಎಚ್. ರಂಗನಾಥ್.—ನೀವೂ ವಕೀಲರಿದ್ದೀರಿ, ನಾವೂ ವಕೀಲರಿದ್ದೇವೆ. ಎಫಿಶಿಯೆಂಟ್ ಎಂದು ಯಾವ ಅರ್ಥದಲ್ಲಿ ಹೇಳುವುದು ?

ಶ್ರೀ ಎ. ಲಕ್ಷ್ಮೀಸಾಗರ್.—ವಕೀಲರ ಕೆಲಸದಲ್ಲಿ ಸಹಕಾರಿಯಾಗಿ, ಸಹಭಾಗಿಯಾಗಿ.....

ಶ್ರೀ ಕೆ. ಎಚ್. ರಂಗನಾಥ್.—ಸಹಕಾರಿ ಎಂದರೆ ಹೇಗೆ ? ೧೦ ರೂಪಾಯಿ ಸ್ಟಾಂಪ್‌ಗೆ ೨೦ ರೂಪಾಯಿ ಪಡೆದುಕೊಳ್ಳುತ್ತಾರಲ್ಲಾ ? ಇಂತಹ ಸಹಕಾರವೇ ?

ಶ್ರೀ ಬಿ. ಎಲ್. ಗೌಡ.—ಅವರ ಅನುಭವವನ್ನು ಅವರು ಹೇಳುತ್ತಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಗೌಡರ ಅನುಭವ ಒಂದು ಇರಬಹುದು, ಮಾನ್ಯ ಲಕ್ಷ್ಮೀಸಾಗರ್ ಅವರ ಅನುಭವ ಒಂದು ಇರಬಹುದು, ನನ್ನ ಅನುಭವ ಒಂದು ಇರಬಹುದು. ಈ ಬಗ್ಗೆ ಸ್ಪಷ್ಟವಾಗಿ ಹೇಳಲಿ.

ಶ್ರೀ ಎ. ಲಕ್ಷ್ಮೀಸಾಗರ್.—ವಕೀಲರ ಜೊತೆ ಸೇರಿ ಗುಮಾಸ್ತರೂ ಕೆಲಸ ಮಾಡುತ್ತಾರೆ. ಅವರು ಟೈಪಿಂಗ್ ವಿಚಾರದಲ್ಲಿ, ಕೋರ್ಟ್ ಅಟೆಂಡ್ ಮಾಡುವ ವಿಚಾರದಲ್ಲಿ, ಕೇಸ್ ಫೈಲ್ ಮಾಡುವ ವಿಚಾರದಲ್ಲಿ, ಪುಸ್ತಕಗಳನ್ನು ಹೊಲೆಯುವ, ಸ್ಟ್ಯಾಂಪ್ ಕಟ್ಟುವ ವಿಚಾರದಲ್ಲಿ ವಕೀಲರಿಗೆ ಇವರು ಸಹಕಾರಿಯಾಗಿರುತ್ತಾರೆ. ನಾನು ವಕೀಲಿ ವೃತ್ತಿಯಲ್ಲಿ ೨೮ ವರ್ಷದ ಅನುಭವವನ್ನು ಪಡೆದಿದ್ದೇನೆ. ಅವರು ಎಷ್ಟು ಸೇವೆ ಮಾಡಿದರೂ ಕೂಡಾ ಒಂದು ಆರ್ಥಿಕ ಶಕ್ತಿ ಅವರಿಗೂ ಇರುವುದಿಲ್ಲ. ನೂರರಲ್ಲಿ ಒಬ್ಬರಿಗೂ ಕೂಡಾ ಭದ್ರತೆ ಇರುವುದಿಲ್ಲ. ಒಂದು ಆರ್ಥಿಕವಾದ ನಿಲುಗಡೆ ಇಲ್ಲ. ಕರ್ನಾಟಕ ರಾಜ್ಯದಲ್ಲಿ ವಕೀಲರ ಗುಮಾಸ್ತರ ಸಂಘವನ್ನು ಕೂಡಾ ಮಾಡಿಕೊಂಡು ಅವರಿಗೆ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಂಡಿದ್ದಾರೆ. ಅವರಿಗೂ ಈ ಒಂದು ಬಿಲ್‌ನಲ್ಲಿ ವ್ಯವಸ್ಥೆ ಮಾಡಿದ್ದೇವೆ.

ಕೆಲವರು ಈ ಡೌಟ್ ಕೆಲಸ ಮಾಡುವವರು ಇದ್ದಾರೆ. ದೊಡ್ಡ ದೊಡ್ಡ ಜಾಗಗಳನ್ನು ಹಿಡಿದು ಕೊಂಡಿದ್ದಾರೆ. ಅವರು ತಾತ್ಕಾಲಿಕವಾಗಿ ಮಾಡುವುದು ದೊಡ್ಡ ಕೆಲಸ. ನಮ್ಮಲ್ಲಿ ಡೌಟ್‌ಗಳಿಗೆ, ಕೂಟ್ ಲಾಯರ್‌ಗಳಿಗೆ ಜಾಗ ಇಲ್ಲ. ವಕೀಲರಿಗೆ ಮತ್ತು ವಕೀಲರ ಗುಮಾಸ್ತರಿಗೆ ಮಾತ್ರ ಜಾಗ.

ಶ್ರೀ ವೈ. ರಾಮಕೃಷ್ಣ —ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಈ ಬಿಲ್ಲನ್ನು ಹಿಂದಿನ ಸರ್ಕಾರ ಮಂಡನೆ ಮಾಡಿದೆ. ಈ ಬಿಲ್ಲನ್ನು ಹೈಕೋರ್ಟ್ ಒಪಿನಿಯನ್‌ಗೆ ಕಳುಹಿಸಿಕೊಟ್ಟಿದ್ದಕ್ಕೋಸ್ಕರ ತಡ ಆಯಿತಂ ಎನ್ನುವುದನ್ನು ಹೇಳಿದ್ದಾರೆ. ಈ ಒಂದು ಬಿಲ್ಲಿನ ಬಗ್ಗೆ ಅಭಿಪ್ರಾಯ ಕಳುಹಿಸಿಕೊಡಲು ಹೈಕೋರ್ಟಿಗೆ ಕಳುಹಿಸಿತ್ತು ಮತ್ತು ಬಾರ್ ಕೌನ್ಸಿಲ್ ಆಫ್ ಇಂಡಿಯಾ ಅವರ ಅಭಿಪ್ರಾಯಕ್ಕೂ ಕಳುಹಿಸಿ ಕೊಟ್ಟಿತ್ತು. ಕರ್ನಾಟಕ ಬಾರ್ ಕೌನ್ಸಿಲ್‌ಗೆ ಕಳುಹಿಸಿಕೊಟ್ಟಿತ್ತು. ಬಾರ್ ಅಸೋಸಿಯೇಷನ್ ಅವರಿಗೆ ಕಳುಹಿಸಿಕೊಟ್ಟಿತ್ತು. ಅದಕ್ಕೆ ಅವರು ಒಪ್ಪಿಗೆ ಕೊಟ್ಟಿದ್ದಾರೆಯೇ ಅಥವಾ ಸೂಚನೆ ಏನಾದರೂ ಮಾಡಿದ್ದಾರೆಯೇ ಅದರ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಬೇಕು. ಇನ್ನು ಎರಡನೆಯದಾಗಿ ಹೇಳ ಬೇಕೆಂದರೆ, ವಕೀಲರ ಜೊತೆ ಕೆಲಸ ಮಾಡತಕ್ಕ ಗುಮಾಸ್ತರಿಗೂ ತಂದಿದ್ದೀರಿ. ಬಹುಶಃ ಇದು ಇಂಡಿಯಾ ದೇಶದಲ್ಲೇ ಎಲ್ಲಿಯೂ ಇಲ್ಲ, ಇದು ಯಾವ ರಾಜ್ಯದಲ್ಲಿದೆ ಎನ್ನುವುದನ್ನು ತಾವು ಏನಾದರೂ ಓದಿ ಮಾಡಿದ್ದರೆ ದಯವಾಡಿ ತಿಳಿಸಬೇಕು. ಯಾವ ರಾಜ್ಯದಲ್ಲೂ ಈ ಗುಮಾಸ್ತರಿಗೂ ಪ್ರಾವಿಜನ್ ಇರಲಿಲ್ಲ. ಯಾವ ರಾಜ್ಯದಲ್ಲಿಯಾದರೂ ಸೇರಿಸಿದ್ದು ನೋಡಿ ಮಾಡಿದ್ದೀರಾ ? ಇವೊತ್ತು ಬಿಲ್ಲು ಪಾಸ್ ಮಾಡುವುದು ಅಷ್ಟೇ ಅಲ್ಲ. ಅದು ಇಂಪ್ಲಿಮೆಂಟ್ ಆಗಬೇಕು. ಬಿಲ್ಲಿನಲ್ಲಿ ಗ್ರೂಪ್ ಇನ್ಸೂರೆನ್ಸ್ ಕಾಂಪೆನ್ಸೇಟೆಡ್ ಮಾಡಿದ್ದೀರಾ, ಗುಮಾಸ್ತರಿಗೆ ಏನು ಮಾಡಿದ್ದೀರಾ ಇದು ಅಷ್ಟು ಯಶಸ್ವಿಯಾಗ ಲಾರದು. ಇನ್ನು ಯಶಸ್ವಿಯಾಗಿ ಮಾಡಬೇಕಾದರೆ, ಇದಕ್ಕೆ ಬೇಕಾದಂಥ ಸಲಹೆಗಳನ್ನು ಕೊಡುತ್ತೇನೆ ಅಮೆಂಡ್‌ಮೆಂಟ್ ಬೇಕಾದರೆ ನಿಧಾನಕ್ಕೆ ತನ್ನಿ, ಅವರ ಕಲ್ಯಾಣಕ್ಕೆ ಬೇರೆ ಆಕ್ಟ್‌ನ್ನು ತನ್ನಿ. ಈಗ ಅಮೆಂಡ್‌ಮೆಂಟ್ ಮೂಲಕ ತರುತ್ತೇನೆಂದು ಹೇಳುವುದು ಸಾಧುವಾದುದಲ್ಲ, ಇದಕ್ಕೆ ಕೊಟ್ಟರತಕ್ಕ ಅಡ್ವೊಕೇಟ್ ವೆಲ್‌ಫೇರ್ ಇದರಲ್ಲಿ ಸರಿಯಾಗಿಲ್ಲ. ಇದನ್ನು ನಾನು ಅಬ್ಜಕ್ಟ ಮಾಡುತ್ತೇನೆಂದು ತಾವು ತಿಳಿಯಬಾರದು.

ಶ್ರೀ ಎ.ಲಕ್ಷ್ಮೀಸಾಗರ್.—ಅದರಲ್ಲಿ ಸರಿಯಾಗಿದೆ,ತಾವು ಸರಿಯಾಗಿ ನೋಡಲಿಲ್ಲ ಎಂದೂ ಕಾಣುತ್ತದೆ. Advocates Welfare Fund and matters connected therewith ಎಂದು ಇದೆ.

ಶ್ರೀ ವೈ. ರಾಮಕೃಷ್ಣ.—ಅಮೆಂಡ್‌ಮೆಂಟ್ ಬಗ್ಗೆ ಮಾತನಾಡುತ್ತೇನೆ. ಅದು ಎಫೆಕ್ಟಿವ್ ಆಗಿಲ್ಲ. ಎಫೆಕ್ಟೀವ್ ಆಗಿ ಫಂಡ್ ಕಲೆಕ್ಟ್ ಮಾಡಲಿಕ್ಕೆ ಆಗುವುದಿಲ್ಲ.

Mr. SPEAKER. He has piloted it. I don't think you are objecting to it.

Sri Y. Ramakrishna.—I am speaking on this amendment only.

Mr. SPEAKER.—That was one of the reasons why the Bill was delayed.

Sri. Y. RAMAKRISHHNA,—Section 4–Establishment of the Trust Committee ಇದನ್ನು ಮಾಡಬೇಕಾದರೆ ಸರ್ಕಾರ ಎಚ್ಚರಿಕೆ ವಹಿಸಬೇಕು. ಯಾರಿಗೆ ಕಮಿಟ್‌ಮೆಂಟ್ ಇದೆ, ಯಾರು ಇದನ್ನು ವಾಲಂಟರಿಯಾಗಿ ಮಾಡಲಿಕ್ಕೆ ಬರುತ್ತಾರೆ ಅವರಿಗೆ ಅವಕಾಶ ಕಲ್ಪಿಸಿಕೊಡ ಬೇಕು. ಆಗ ಮಾತ್ರ ಆಕ್ಟ್ ಚೆನ್ನಾಗಿ ಕೆಲಸ ಮಾಡಲಿಕ್ಕೆ ಸಾಧ್ಯ. ಇಲ್ಲದೇ ಇದ್ದರೆ ಪ್ರಯೋಜನ ಆಗುವುದಿಲ್ಲ. ಕಮಿಟ್‌ಮೆಂಟ್ ಜನ ಮುಂದೆ ಬಂದಾಗ ನಾಮಿನೇಟ್ ಮಾಡುವುದಕ್ಕೆ ಸೆಕ್ಷನ್ ಸಬ್ ಕ್ಲಾಸ್ ನಾಲ್ಕರಲ್ಲಿ ಅಧಿಕಾರ ಇದೆ. ಇದು ಸರಿಯಾಗಿ ಇಂಪ್ಲಿಮೆಂಟ್ ಆದರೆ ಒಳ್ಳೆಯ ಹೆಸರು ಬರಬೇಕಾಗುತ್ತದೆ. ಈಗ ವಿತಕ್ಕೆ ತಡವಾಗಿದೆ ಎಂದು ಹೇಳಿದ್ದೀರಿ. ಗವರ್ನಮೆಂಟ್ ಸರ್ವೆಂಟ್ಸ್ ಬಗ್ಗೆ ಯೋಚನೆ ಮಾಡುತ್ತೇವೆಂದು ಹೇಳಿದ್ದೀರಿ. ತಾವು ತಂದಿರತಕ್ಕದ್ದು ಲೇಟಾಗಿದರೆ ಇದು ಎಫೆಕ್ಟೀವ್ ಆಗಲಾರದು ಎಂಬ ನಿರಾಶಾಭಾವನೆಯನ್ನು ಹೊಂದಿದ್ದೇನೆ. ಈಗ ತಾವು ಆ್ಯಕ್ಟ್ ಪಾಸ್ ಮಾಡಿಕೊಂಡು ಅಮೆಂಡ್‌ಮೆಂಟ್ ನಿಧಾನವಾಗಿ ತನ್ನಿ. ಇನ್ನು ಗ್ರೂಪ್ ಇನ್‌ಶ್ಯೂರೆನ್ಸ್ ಯೋರೋ ದಾನ ಧರ್ಮ ಕೊಟ್ಟರೆ ಫಂಡ್ ಮಾಡಬಹುದು ಎಂದು ಇದೆ. ಇದು ಎಫೆಕ್ಟೀವ್ ಆಗಿ ಮಾಡಬೇಕಾದರೆ ಅದರ ಕಡೆ ಆಲೋಚನೆ ಮಾಡಬೇಕಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ಬಿಲ್ಲಿನ ತತ್ವವನ್ನು ಒಪ್ಪಿಕೊಳ್ಳುವಂತಾದ್ದು ಆಗಿದೆ. ಈ ಬಿಲ್ಲಿನ ಪ್ರಕಾರ ಯಾರು ಯಾರಿಗೆ ಅನ್ವಯಿಸುತ್ತದೆ. ಯಾರು ಅಡ್ವಕೇಟ್ ಆಗಿ ಎನ್‌ರೋಲ್ ಆಗಿರುತ್ತಾರೆ. ಕಾಂಟ್ರಿಬ್ಯೂಟ್ ಮಾಡಿರುತ್ತಾರೆ ಅಂಥವರಿಗೆ ಅನ್ವಯಿಸುತ್ತದೆ. ಒಂದು ಕ್ಯಾಟಗರಿ ಆಫ್ ಲಾಯರ್ ಇರುತ್ತಾರೆ, ಅವರು ಅಡ್ವಕೇಟ್ ಪಾಸ್ ಮಾಡಿರುತ್ತಾರೆ. ಅವರು ಕರ್ನಾಟಕ ರಾಜ್ಯದಲ್ಲಿ ಪ್ರಾಕ್ಟೀಸ್ ಮಾಡುವುದಿಲ್ಲ, ಬೇರೆ ಕಡೆ ಕೆಲಸ ಮಾಡುತ್ತಿರುತ್ತಾರೆ. ಅನೇಕ ಕೈಗಾರಿಕೆಗಳಲ್ಲಿ, ಪರಸನಲ್ ಆಫೀಸರ್, ಪರಸನಲ್ ಮ್ಯಾನೇಜರ್‌ರವರುಗಳು ಅಡ್ವಕೇಟ್ ಪಾಸ್ ಮಾಡಿರುತ್ತಾರೆ. ಬಿ.ಎ.ಎಲ್.ಎಲ್.ಬಿ. ಮಾಡಿರುತ್ತಾರೆ. ಅಲ್ಲಿ ಕೆಲಸ ಬಿಟ್ಟ ತಕ್ಷಣ ಇಲ್ಲಿ ಪ್ರಾಕ್ಟೀಸ್ ಮಾಡುತ್ತಾರೆ. ಅಂತಹವರಿಗೂ ಈ ಅನುಕೂಲ ಅನ್ವಯಿಸುತ್ತದೆಯೇ ?

MR. SPEAKER.—Minimum period must be fixed.

ಶ್ರೀ ಎ ಲಕ್ಷ್ಮಿಸಾಗರ್.—ಇದು ಅಡ್ವಕೇಟ್‌ಗಳಿಗೆ ಮಾತ್ರ ಅನ್ವಯಿಸತಕ್ಕದ್ದು. ಅದರ ಬಗ್ಗೆ ಡಿಫೆನಿಷನ್‌ನಲ್ಲಿ ಕೊಟ್ಟಿದ್ದೇನೆ.

> According to the definition, "Advocate" means any person who has been entered in the State roll of Advocates prepared and maintained by the Bar Council of Karnataka under section 17 of the Advocates Act, 1961 and includes a legal practitioner whose rights are saved under Section 55 of the said Act and who ordinarily practises in the State of Karnataka". ಬೇರೆಯವರು ಬರಲಿಕ್ಕೆ ಆಗುವುದಿಲ್ಲ.

MR. SPEAKER.—Minimum period of practice must be fixed,

ಶ್ರೀ ಎಂ. ವೀರಪ್ಪಮೊಯಿಲಿ.—ಮಿನಿಮಮ್ ಪೀರಿಯಡ್ ಐದಾರು ವರ್ಷಗಳ ಕಾಲ ಎಂದು ಹಾಕಿದರೆ ಆಮ್ಟುವತ್ತಿಗೆ ವಕಾಲತ್ತು ಮಾತಿ ಒಳ್ಳೆಯ ಟ್ಯಾಲೆಂಟ್ಸ್ ಪಡೆದುಕೊಂಡಿರುತ್ತಾರೆ.ಆದುದರಿಂದ ಇದಕ್ಕೆ ಮೊದಲೇ ಅವರಿಗೆ ಈ ಸೌಲಭ್ಯ ಸಿಕ್ಕುವ ಹಾಗೆ ಮಾಡಬೇಕಾಗಿದೆ ಪ್ರತಿಯೊಂದು ಮೊಫ್ಯೂಸಿಲ್ ಬಾರ್‌ನಲ್ಲೆ ಒಂದು ಬಾರ್ ಅಸೋಸಿಯೇಷನ್ ಇದೆ, ಬಾರ್ ಕೌನ್ಸಿಲ್ ಅಸೋಸಿಯೇಷನ್ ಬೇರೆ ಕಡೆ ಇರುವುದರಿಂದ active member ಇರುತ್ತಾರೆ. ಇದನ್ನು ದುರುಪಯೋಗಪಡಿಸಿಕೊಳ್ಳಲಿಕ್ಕೆ ಅವಕಾಶ ವಿಲ್ಲ. ಹೊರಗೆ ಒಂದು ಬಾರ್ ಅಸೋಸಿಯೇಷನ್ ಮೆಂಬರ್ ಇರುವಾಗ ಆ್ಯಕ್ಟೀವ್ ಆಗಿ ಅದರಲ್ಲಿ ದುರುಪಯೋಗ ಮಾಡುವ ಪ್ರಶ್ನೆ ಬರುವುದಿಲ್ಲ. ಆ ರೀತಿಯಾಗಿ ದುರುಪಯೋಗ ಮಾಡಿದರೆ ರೆಸಿಡ್ಯುಯರಿ ಪವರ್ಸ್ ಇದೆ, ಟೈಮ್ ಲಿಮಿಟ್ ಮಾಡಿದರೆ ಯಾವ ಉದ್ದೇಶದಿಂದ ತರುತ್ತೇವೆ ಅದೇ ಇನ್‌ಫ್ರಾಕ್ಟ್ಯುಯಸ್ ಆಗುತ್ತದೆ. The purpose of this Act becomes infructious. The person who deserves most of all the persons is the person who serve the bar for the first 4–5 years.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವಕೀಲರ ಅಸಡ್ಡೆಯಿಂದ ಕಕ್ಷಿದಾರರಿಗೆ ಆಗತಕ್ಕ ತೊಂದರೆ ಬಗ್ಗೆ ಒಂದು ಕಾನೂನು ತರಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಅಂಥಾದ್ದು ಏನಾದರೂ ಇದ್ದರೆ ಸ್ಟೇಟ್ ಬಾರ್ ಕೌನ್ಸಿಲ್ ಎಂದು ಒಂದು ಸಂಸ್ಥೆ ಇದೆ. ಆಡ್ವೊಕೇಟ್ಸ್ ಆಕ್ಟ್ ಪ್ರಕಾರ ಆಗಿರತಕ್ಕ ಒಂದು ಬಾಡಿ ಇದೆ. ಲಾಯರ್ ಅವರ ಅಚಾತುರ್ಯದಿಂದ ನಡೆದಂತಾದ್ದು ಏನಾದರೂ ಇದ್ದರೆ ಅಲ್ಲಿಗೆ ತಿಳಿಸಿ. ಅಂಥ ವಕೀಲರ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ಅಧಿಕಾರ ಇದೆ. ಅದು ಅಷ್ಟೇ ಅಲ್ಲ, ಅದರಲ್ಲಿ ಆಡಿಟರ್ಸ್‌ದು ಇದೆ, ಚಾರ್ಟರ್ಡ್ ಅಕೌಂಟೆಂಟುಗಳದು ಇದೆ, ಪ್ರೊಫೆಷನ್ ಡಾಕ್ಟರುಗಳದು ಇದೆ. ಕಾನೂನಿನ ಪರಿಮಿತಿಯಲ್ಲಿ ಕೆಲಸ ಮಾಡತಕ್ಕವರು ಅವರು ಪ್ರೊಫೆಷನ್‌ಗೆ ವಿರುದ್ಧವಾಗಿ ಮಾಡಿದರೆ ಅವರು ಶಿಕ್ಷಾರ್ಹರು. ವಕೀಲ ವೃತ್ತಿಯಿಂದ ತೆಗೆದು ಹಾಕಲಿಕ್ಕೆ ಕಾನೂನು ಮಾಡಿದ್ದಾರೆ. ನಿಮ್ಮ ಮನಸ್ಸಿನಲ್ಲಿ ಅಂಥಾದ್ದು ಯಾವುದಾದರೂ ಇದ್ದರೆ ಅಲ್ಲಿಗೆ ಕಳುಹಿಸಿ ಅಂಥ ವಕೀಲರ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ಕಾನೂನು ಇದೆ. ಅಂಥ ಒಂದು ವಕೀಲರ ಮೇಲೆ ಕ್ರಮ ತೆಗೆದುಕೊಂಡು ಸುಪ್ರೀಮ್ ಕೋರ್ಟಿಗೆ ಅಪೀಲು ಹೋಗಿ ಅಲ್ಲಿ ಕನ್‌ಫರಮ್ ಆಗಿರತಕ್ಕ ಉದಾಹರಣೆ ಇದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ತಾವು ತಮ್ಮ ಜವಾಬ್ದಾರಿಯನ್ನು ವಂಚಿಸಿರಿ. ಅಂಥವರು ತಮ್ಮ ಹತ್ತಿರ ಬಂದರೆ ಬಾರ್ ಕೌನ್ಸಿಲ್‌ಗೆ ಅವರನ್ನು ಕಳುಹಿಸುತ್ತೀರಿ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಪಬ್ಲಿಕ್ ಗ್ರಿವೆನ್ಸಸ್ ಮಿನಿಸ್ಟರ್.

ಶ್ರೀ ವಿ.ಎಸ್. ಆಚಾರ್ಯ.—ಇದು ವಕೀಲರು ಮತ್ತು ವಕೀಲರ ಗುಮಾಸ್ತರಿಗೆ ಸಂಬಂಧಪಟ್ಟಂತೆ ಇದೆ. ಆದೇರೀತಿ ಡಾಕ್ಟರ್‌ಗಳಿಗೆ ಮತ್ತು ಅವರ ಹತ್ತಿರ ಇರತಕ್ಕ ಕಾಂಪೌಂಡರ್‌ಗಳಿಗೆ ಸಂಬಂಧಪಟ್ಟಂತೆ ಏನಾದರೂ ಬಿಲ್ ತರುತ್ತೀರಾ ? ಮಾನ್ಯ ಸದಸ್ಯರಾದ ಹುಚ್ಚಮಾಸ್ತಿಗೌಡರು ಮಾತನಾಡುತ್ತಾ ವಕೀಲರು ತಪ್ಪು ಮಾಡಿದರೆ ಅರು ಅಡಿ ಮೇಲಕ್ಕೆ ಡಾಕ್ಟರ್‌ಗಳು ತಪ್ಪು ಮಾಡಿದರೆ ಆರು ಅಡಿ ಕೆಳಕ್ಕೆ ಹೋಗಬೇಕಾಗುತ್ತದೆ ಎಂದು ಹೇಳಿದರು. ಡಾಕ್ಟರ್‌ಗಳ ಡಿಸ್ಪೆನ್ಸರಿಯಲ್ಲಿ ಕಾಂಪೌಂಡರ್ ಇದ್ದಹಾಗೆ ಈ ವಕೀಲರ ಹತ್ತಿರ ಇರತಕ್ಕ ಗುಮಾಸ್ತರುಗಳು, ಇವತ್ತು ಇವರಿಗೋಸ್ಕರ ತಂದಿರತಕ್ಕ ಬಿಲ್ಲು ಬಹಳ ಮಂಖ್ಯಾಪಾದುದು. ಆದ್ದರಿಂದ ಇದನ್ನು ಇವತ್ತು ಪಾಸ್ ಮಾಡದೆ ನಾಳೆಯ ದಿವಸಕ್ಕೆ ಮುಂದೂವರಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ಮಾನ್ಯ ಅಧ್ಯಕ್ಷರೆ, ಈ ಕಡೆ ಮಂತ್ರಿ, ಆ ಕಡೆ ಕುಳಿತಿರುವವರ ಪೈಕಿ ಪ್ರಾಕ್ಟೀಸ್ ಮಾಡದೇ ಇರುವ ವಕೀಲರುಗಳು ಮತ್ತು ಬಹಳ ಅನುಭವ ಇರತಕ್ಕ ಮಾಜಿ ವಕೀಲರುಗಳೂ ಇದ್ದಾರೆ. ಈ ಬಿಲ್‌ನ ಪ್ರಕಾರ ಅವರಿಗೂ ಏನಾದರೂ ಪರಿಹಾರ ಸಿಕ್ಕುತ್ತದೆಯೆ ?

ಶ್ರೀ ಎ. ಲಕ್ಷ್ಮೀಸಾಗರ್.—ಅವರಿಗೂ ಸಿಕ್ಕುತ್ತದೆ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ಕರ್ನಾಟಕ ಅಡ್ವೋಕೇಟ್ಸ್ ವೆಲ್‌ಫೇರ್ ಫಂಡ್ ಬಿಲ್ ಎಂದು ಇದುವರೆಗೂ ಇತ್ತು. ಈಗ ಅದರಲ್ಲಿ ವಕೀಲರ ಗುಮಾಸ್ತರನ್ನೂ ಸೇರಿಸುತ್ತಿದ್ದೀರಿ. ಆದರೆ ಇದಕ್ಕೆ ಸಂಬಂಧಪಟ್ಟಂತೆ ಅಮೆಂಡ್‌ಮೆಂಟ್ ಮಾತ್ರ ಕಾಣುತ್ತಿಲ್ಲ.

ಇನ್ನು ಮಂಜೂರನೆಯದಾಗಿ ಹೇಳುವುದಾದರೆ, ವಕೀಲರು ಕಟ್ಟತಕ್ಕ ಚಂದಾ ಹಣ ಏನಿರುತ್ತದೆ ಅದನ್ನು ಅವರು ಕೈಯಿಂದ ಕೊಡುವುದಿಲ್ಲ. ಅವರ ಕಕ್ಷಿದಾರರ ಕಡೆಯಿಂದ ತೆಗೆದುಕೊಂಡು ಕಟ್ಟುತ್ತಾರೆ. ಅಲ್ಲದೆ ವಕೀಲರ ಹತ್ತಿರ ಇರತಕ್ಕ ಗುಮಾಸ್ತರಿಗೆ ಹೆಚ್ಚಿನ ಹಣ ಏನೂ ಸಿಕ್ಕುವುದಿಲ್ಲ. ಏಕೆಂದರೆ ವಕೀಲರ ಹತ್ತಿರ ಈ ಗುಮಾಸ್ತರು ಕೆಲಸಕ್ಕೆ ಸೇರಿರುತ್ತಾರೆ. ಈ ಗುಮಾಸ್ತರಿಗೆ ವಕೀಲರು ತಮ್ಮ ವಂತಿಗೆಯನ್ನು ಕೊಡುವಂತೆ ಮಾಡಬೇಕು. ಆ ಹೊಣೆಗಾರಿಕೆಯನ್ನು ತಾವು ವಕೀಲರಮೇಲೆ ಹಾಕುವುದು ಉತ್ತಮ. ಇದಕ್ಕೆ ಸಂಬಂಧಪಟ್ಟಂತೆ ಒಂದು ನಿಯಮವನ್ನು ಇದರಲ್ಲಿ ಅಳವಡಿಸಬೇಕು.

ಶ್ರೀ ಜೆ.ಡಿ. ಸೋಮಪ್ಪ.—ಮಾನ್ಯ ಅಧ್ಯಕ್ಷರೆ, ನನ್ನ ಸ್ನೇಹಿತರೊಬ್ಬರು ಕಳೆದ ೫೦ ವರ್ಷದಿಂದಲೂ ವಕೀಲರಾಗಿಯೇ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಇರುವುದಕ್ಕೆ ಮನೆಯೂ ಇಲ್ಲ. ಆದರೆ ಅವರ ಹತ್ತಿರ ಕೆಲಸಮಾಡುತ್ತಿರತಕ್ಕ ಒಬ್ಬ ಗುಮಾಸ್ತ ೪ ಮನೆಗಳನ್ನು ಕಟ್ಟಿಸಿಕೊಂಡು ಬಾಡಿಗೆಗೆ ಕೊಟ್ಟಿದ್ದಾನೆ. ಇದಕ್ಕೆ ತಾವು ಏನು ಹೇಳುತ್ತೀರಿ ?

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೆ, ಈ ದಿವಸ ವಕೀಲರು ಮತ್ತು ಅವರ ಹತ್ತಿರ ಕೆಲಸ ಮಾಡತಕ್ಕ ಗುಮಾಸ್ತರಿಗೆ ಅನುಕೂಲವಾಗುವ ದೃಷ್ಟಿಯಿಂದ ಕಲ್ಯಾಣ ನಿಧಿಯನ್ನು ತೆರೆಯಬೇಕೆಂದು ಒಂದು ಪ್ರಸ್ತಾವನೆಯನ್ನು ಇಲ್ಲಿ ತಂದಿದ್ದೀರಿ. ಇದು ಅವರಿಗೆ ಪ್ರಯೋಜನಕಾರಿಯಾಗಿದೆ. ಆದೇರೀತಿ ಮಾನ್ಯ ಸದಸ್ಯರಾದ ಆಚಾರ್ಯರವರು ಮಾತನಾಡಿ ಡಾಕ್ಟರ್‌ಗಳಿಗೆ ಮತ್ತು ಅವರ ಹತ್ತಿರ ಕೆಲಸ ಮಾಡತಕ್ಕ ಕಾಂಪೌಂಡರ್‌ಗಳಿಗೆ ಇದೇ ಸೌಲಭ್ಯವನ್ನು ಕಲ್ಪಿಸಿ ಕೊಡಬೇಕೆಂದು ಅಭಿಪ್ರಾಯವನ್ನು ವ್ಯಕ್ತ ಮಾಡಿದರು. ಆದರೆ ವರ್ತಕರು ಮತ್ತು ಅವರ ಹತ್ತಿರ ಕೆಲಸಮಾಡತಕ್ಕ ಗುಮಾಸ್ತರಿಗೆ ತಾವು ಇದೇ ಯೋಜನೆಯನ್ನು ತರುವ ಉದ್ದೇಶ ಇದೆಯೆ ? ಅವರು ಅಸಂಘಟಿತ ವರ್ಗವಾದ್ದರಿಂದ ಇದನ್ನು ಅವರಿಗೂ ಸಿಕ್ಕುವಂತೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಧನಂಜಯಕುಮಾರ್.—ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಒಳ್ಳೆಯ ಯೋಜನೆಯನ್ನೇ ತಂದಿದ್ದಾರೆ. ಇದರಲ್ಲಿ ವಕೀಲರು ಮತ್ತು ಅವರ ಗುಮಾಸ್ತರಿಗೆ ಕಲ್ಯಾಣ ನಿಧಿ ಏರ್ಪಡಿಸಬೇಕೆಂದು ಆಳವಡಿಸಿರುವುದು ನಿಜಕ್ಕೂ ಸ್ವಾಗತಾರ್ಹ. ಇದಕ್ಕೆ ಬಾರ್ ಅಸೋಸಿಯೇಷನ್‌ನಿಂದ ವಂತಿಗೆಯನ್ನು ಕೊಡಬೇಕೆಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳಿಗೂ ಗೊತ್ತಿರುವಂತೆ ಸಾಮಾನ್ಯವಾಗಿ ಬಾರ್ ಅಸೋಸಿಯೇಷನ್‌ನಲ್ಲಿ ಹಣವೇ ಇಲ್ಲದಿರುವುದರಿಂದ ಅವರಿಂದ ವಂತಿಗೆ ಸಿಕ್ಕವುದು ಬಹಳ ಕಷ್ಟ. ಈ ಯೋಜನೆಯ ವ್ಯಾಪ್ತಿಯೇನೋ ದೊಡ್ಡದಾಗಿದೆ. ಗುಮಾಸ್ತರಿಗೆ ಹೆಚ್ಚಿನ ಹಣ ಸಿಕ್ಕಬೇಕು. ಆದರೆ ಇದಕ್ಕೆ ಬೇಕಾದಂಥ ಹಣದ ವರಮಾನದ ಮೂಲವನ್ನೂ ಇವತ್ತು ಕಂಡುಹಿಡಿಯಬೇಕಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದನ್ನು ಎಫೆಕ್ಟೀವ್ ಆಗಿ ಜಾರಿಗೆ ತರಬೇಕೂ. ಕಮಿಟಿಯನ್ನು ಮಾಡುವಾಗ ಕಮಿಟೆಡ್ ಟೀವಲ್‌ನ್ನೇ ಹಾಕಬೇಕೆಂದು ಹೇಳಿದ್ದೇವೆ. ವಕೀಲರು ಮತ್ತು ವಕೀಲರ ಗುಮಾಸ್ತರಿಗೆ ಈ ಕಲ್ಯಾಣನಿಧಿಯ ಉಪಯೋಗ ಸಿಕ್ಕುವಂತೆ ಮಾಡಬೇಕು. ಇದು ಇದರ ಉದ್ದೇಶ. ಇದನ್ನು ಜಾರಿಗೆ ತಂದಮೇಲೆ ಇದರಲ್ಲಿ ಏನಾದರೂ ಲೋಪದೋಷಗಳು ಕಂಡುಬಂದರೆ ಆಗ ಅದನ್ನು ಸರಿಪಡಿಸುವುದಕ್ಕೆ ನಾವು ಯೋಚನೆ ಮಾಡುತ್ತೇವೆ.

ಶ್ರೀ ವೈ. ರಾಮಕೃಷ್ಣ.—ಗ್ರೂಪ್ ಇನ್‌ಷ್ಯೂರೆನ್ಸ್‌ನ ಏರ್ಪಾಡು ಮಾಡಿದರೆ ಅನುಕೂಲವಾಗುತ್ತದೆ. Let it be incorporated in the Act.

ಶ್ರೀ ಹೆಚ್. ಗಂಗಾಧರನ್.—ಗ್ರೂಪ್ ಇನ್‌ಷ್ಯೂರೆನ್ಸ್‌ನ ಮಾಡುವುದು it need not be in the Act. You can introduce separately.

ಶ್ರೀ ಎ. ಲಕ್ಷ್ಮೀಸಾಗರ್.—ಗ್ರೂಪ್ ಇನ್‌ಷ್ಯೂರೆನ್ಸ್ ಮಾಡಬೇಕಾದರೆ ಇದರಲ್ಲಿ ನಿಯಮವೇ ಇರಲೇಬೇಕೆಂದು ಏನೂ ಇಲ್ಲ. ಇಲ್ಲಿ ಸಮಯ ಇಲ್ಲದಿರುವುದರಿಂದ ನಾನು ಇದರ ಬಗ್ಗೆ ಹೆಚ್ಚಿನ ವಿವರಕ್ಕೆ ಹೋಗಲಿಲ್ಲ. ಗ್ರೂಪ್ ಇನ್‌ಷ್ಯೂರೆನ್ಸ್‌ಗೆ ಬರತಕ್ಕ ಜನರನ್ನು ಇದರಲ್ಲಿ ಸೇರಿಸಿಕೊಳ್ಳುವುದಕ್ಕೆ ಅವಕಾಶ ಇದೆ. ಇದರಲ್ಲಿ ಯಾರಾದರೂ ಸತ್ತುಹೋದರೆ ಅವರಿಗೆ ಹಣ ಬರುತ್ತದೆ. ಇದನ್ನೆಲ್ಲಾ ಯೋಚನೆ ಮಾಡಿಯೇ ನಾವು ಇವತ್ತು ಈ ಪ್ರಸ್ತಾವನೆಯನ್ನು ಇಲ್ಲಿ ತಂದಿದ್ದೇವೆ. ವಕೀಲರಿಗೆ ಅವರ ಪ್ರಾಕ್ಟೀಸ್ ಟೀರಿಯೆಂಡ್‌ನಮೇಲೆ ಫಿಕ್ಸ್ ಮಾಡುವಂತೆ ಹೇಳುತ್ತೇನೆ. ಈಗ ಮಾನ್ಯ ಸದಸ್ಯರಾದ ಮಲ್ಲಪ್ಪನವರು ಏನು ಹೇಳಿದ್ದಾರೆ ಅದು ಸರಿಯಾಗಿದೆ. ಇವತ್ತು ಸಮಾಜದಲ್ಲಿ ಅ ಸಂಘಟಿತ ಕಾರ್ಮಿಕರು ಯಾರಿದ್ದಾರೆ ಅವರಿಗೆ ಅನುಕೂಲವಾಗುವಂಥ ಕಾನೂನನ್ನು ತರುವುದು ಯೋಗ್ಯವಾದುದು.

ಇನ್ನು ಬಾರ್ ಅಸೋಸಿಯೇಷನ್‌ನಲ್ಲಿ ಹಣವೇ ಇಲ್ಲದಿರುವುದರಿಂದ ಅವರು ಹೇಗೆ ವಂತಿಗೆಯನ್ನು ಕೊಡಲು ಸಾಧ್ಯವಾಗುತ್ತದೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ ಬಾರ್ ಅಸೋಸಿಯೇಷನ್ ನವರು ವಂತಿಗೆಯನ್ನು ಕೊಡಲೇಬೇಕೆಂದು ಏನೂ ಇಲ್ಲ. ಅವರು ವಂತಿಗೆಯನ್ನು ಕೊಟ್ಟರೆ ಅದನ್ನೂ ಇದಕ್ಕೆ ಸೇರಿಸಿಕೊಳ್ಳುತ್ತೇವೆ.

ಈ ಬಿಲ್‌ನಲ್ಲಿ ಕೇವಲ ವಕೀಲರು ಮತ್ತು ಅವರ ಗುಮಾಸ್ತರಿಗೆ ಮಾತ್ರ ಅನುಕೂಲ ಮಾಡಿಕೊಂಡಿದ್ದಾರೆ. ಆದರೆ ಡಾಕ್ಟರ್‌ಗಳಿಗೆ ಏನೂ ಮಾಡಿಲ್ಲವೆಂದು ಒಬ್ಬ ಸದಸ್ಯರು ಕೇಳಿದರು.....

.....

ಶ್ರೀ ಹೆಚ್. ಗಂಗಾಧರನ್.—ಖ್ವಾಮಿ, ಕೆಲವು ವರ್ಗದವರಿಗೆ ಕಲ್ಯಾಣ ನಿಧಿಯನ್ನು ಏರ್ಪಡಿಸುವ ವ್ಯವಸ್ಥೆ ಮಾಡಿದ್ದೀರಿ. ಆದರೆ ಜೀವನದಲ್ಲಿ ಕಲ್ಯಾಣವನ್ನೇ ಆಗದಿರುವವರಿಗೆ ಯಾವ ನಿಧಿಯನ್ನು ಏರ್ಪಾಡು ಮಾಡಿದ್ದೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಕಲ್ಯಾಣ ಆಗದಿರುವವರಿಗೆ ಕಲ್ಯಾಣ ನಿಧಿಯನ್ನು ಏರ್ಪಡಿಸಿಕೊಟ್ಟರೆ ಅದೇ ನನಗೆ ಕಲ್ಯಾಣ ಎಂದು ನಾನು ತಿಳಿದುಕೊಂಡಿದ್ದೇನೆ.

MR. SPEAKER.—I will now put the consideration motion to vote. The question is :

"That the Karnataka Advocates Welfare Fund Bill, 1983, be taken into consideration".

The motion was adopted

Clause by clause consideration

CLAUSE NO. 2

SRI A. LAKSHMI SAGAR (Hon, Minister for Law, Parliamentary Affairs and Housing).—Sir, I beg to move, the following amendment to clause 2.

"That Clause (j), (k), (l), (m), (n) shall be renumbered as Clauses (k), (l) (m), (n), (o) respectively, and before the clause (k) as so renumbered, the following clause shall be inserted, namely :

'(j) 'Registered clerk' means a person who is registered as a recognised clerk or gumasta of an advocate or a pleader in accordance with any rules framed by the High Court of Karnataka under article 225 of the Constitution of India and section 54 of the States Re-organisation Act, 1956 or under section 122 of the Code of Civil Procedure or any other law be taken into consideration".

MR. SPEAKER.—Amendment moved. Now, I put the amendment to vote. The question is :

"That clause (j), (k), (l), (m), (n) shall be renumbered as Clauses (k) (l). (m) (n), (o) respectively, and before the clause (k) as so renumbered, the following clause shall be inserted, namely :

"(j) 'Registered Clerk' means a person who is registered as a recognised clerk or gumaste of an advocate or a pleader in accordance with any rules framed by the High Court of Karnataka under article 225 of the constitution of India and section 54 of the States Re-organisation Act, 1856 or under section 122 of the code of civil Procedure or any other law be taken into consideration".

The amendment was adopted

Clause 2 as amended

MR. SPEAKER.—The question is :

"Clause 2 as amended do stand part of the Bill".

The Motion was adopted and

Clause 2 as amended was added to the Bill.

CLAUSE 3 TO AND SCHEDULE

MR. SPEAKER.—The question is

"That Clause 3 to 26 and Schedule do stand part of the Bill",

The Motion was adopted and

Clause 3 to 26 and Schedule were added to the Bill.

NEW CLAUSE 27

MR. SPEAKER.—The question is

"That New clause 27 do stand part of the Bill"

The motion was adopted and

the new clause 27 was added to the Bill.

CLAUSE 28

MR. SPEAKER.—The hon. Minister may please move clause 28.

5-30 p.m.

There is an amendment to Clause 28.

SRI A. LAKSHMI SAGAR.—Sir, I beg to move.

"That in clause 28 as so renumbered, after the words "the provisions of this Act", the words and figures "other than the prvisions of section 27" shall be inserted".

MR. SPEAKER.—The question is,

"That in clause 28 as so renumbered, after the words "the provisions of this Act", the words and figures "other than the provisions of section 27" shall be inserted.

The motion was adopted

Clause 28 as amended was added to the Bill

CLAUSE 29 AND THE SCHEDULE

MR. SPEAKER,—The question is.

"That Clause 29 and the Schedule do stand part of the Bill".

The motion was adopted and clause 29, and the Schedule were added to the Bill,

CLAUSE IETC.,

MR. SPEAKER.—The question is.

"That Clause 1, the Long Title, the Preamble and the Enacting Formula do stand part of the Bill".

The Motion was adopted and Clauso 1, the Loeg Title. the Preamble and the Enacting Formula were added to the Bi'l.

MOTION TO PASS

SRI A. LAKSHMI SAGAR.—Sir, I beg to move.

"That the Karnataka Advocates Welfare Fund Bill, 1983 be passed".

MR. SPEAKER.—The question is.

"That the Karnataka Advocates Welfare Fund Bill, 1983 be pessed".

The Motion was adopted and the Bilq was passed

MR. SPEAKER.—Regarding the matter for short duration under Rule 68, the Hon'ble Leader of the Opposition has stated that the same can be take up for discussion tomorrow.

NOW THE HOUEE STANDS ADJOURNED TO MEETT TOMORROW AT 11 A.M.

The House adjcurned at forty three minutes past Five of the Clock to meet again on Friday, the 20th January 1983 at Eleven of the Clock.